**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

KARNATAKA SAMSKRIT UNIVERSITY

**कर्नाटक–संस्कृत–विश्वविद्यालय:**

श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಪ್ರ.ಸ./2017–18

ದಿನಾಂಕ: 10.09.2018

ಮಾನ್ಯರೇ,

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ನಲವತ್ತೇಳನೆಯ** ಸಭೆಯು ದಿನಾಂಕ: **07.09.2018ರ ಶುಕ್ರವಾರ ಪೂರ್ವಾಹ್ನ 11.00 ಗಂಟೆಗೆ** ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳು ವಹಿಸಿದ್ದರು. ಈ ಪತ್ರದೊಂದಿಗೆ ಆ ದಿನ ನಡೆದ ಸಭೆಯ ನಡಾವಳಿಯನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಡಲಾಗಿದೆ.

ಈ ಸಭೆಯ ನಡಾವಳಿಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರ ತಲುಪಿದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

Sulpay
ಕುಲಸಚಿವರು
ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು – 560018.

ಇವರಿಗೆ,

1. **ಶ್ರೀಮತಿ ಸುಜಾತ ಗೌಡ,** # 30, 7ನೇ ಹಂತ, 2ನೇ ಮುಖ್ಯರಸ್ತೆ, ಬಿ.ಇ.ಎಂ.ಎಲ್. ಲೇಔಟ್, ಮೈಲಸಂದ್ರ, ಕೆಂಗೇರಿ, ಬೆಂಗಳೂರು – 560059.
2. **ಶ್ರೀ ಶಿವಕುಮಾರ್ ಎನ್.,** # 109, 2ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಪಾಂಡುರಂಗ ಬಡಾವಣೆ, ಅರಕೆರೆ ಗೇಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560076.
3. **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು–560001
4. **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ವಿಧಾನಸೌಧ, ಬೆಂಗಳೂರು–560001
5. **ಸರ್ಕಾರದ ಕಾರ್ಯದರ್ಶಿ,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು–560001
6. **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಪ್ರಸನ್ನಕುಮಾರ್ ಬ್ಲಾಕ್, ಅರಮನೆ ರಸ್ತೆ, ಬೆಂಗಳೂರು–09,
7. **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು–570001.
8. **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002.
9. **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001
10. **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ ಬೆಂಗಳೂರು–560001
11. **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012
12. **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009
13. **ಆಯುಕ್ತರು,** ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001

ಪ್ರತಿಗಳು:

1. **ಘನತೆವೆತ್ತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು,** ರಾಜಭವನ, ಬೆಂಗಳೂರು – 560001
2. **ಮಾನ್ಯ ಕುಲಪತಿಯವರ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
3. ಕಛೇರಿ ಪ್ರತಿ
4. ರಕ್ಷತಾ ಪ್ರತಿ

ದೂರವಾಣಿ: 080 – 26701303 / 26705387; ಇ–ಮೇಲ್: karnatakasanskrituniversity@gmail.com
दूरवाणी: ०८०–२६७०१३०३; २६७०५३८७; ई–सङ्केत: – karnatakasanskrituniversity@gmail.com

## 07.09.2018ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) 47ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ 47ನೇ ಸಭೆಯು** ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಸೆಪ್ಟೆಂಬರ್ 07, 2018ರ ಶುಕ್ರವಾರ ಪೂರ್ವಾಹ್ನ 11.00** ಗಂಟೆಗೆ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಪದ್ಮಾಶೇಖರ್,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಶ್ರೀಮತಿ ಸುಜಾತ ಗೌಡ,** ಬೆಂಗಳೂರು | ಸದಸ್ಯರು |
| ೩. | **ಶ್ರೀ ಶಿವಕುಮಾರ್ ಎನ್.,** ಬೆಂಗಳೂರು | ಸದಸ್ಯರು |
| ೪. | **ಶ್ರೀ ಆರ್ ಸೋಮಶೇಖರ್,** ಉಪ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೫. | **ನಿರ್ದೇಶಕರು,** ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001 – ಪರವಾಗಿ **ಶ್ರೀಮತಿ ಜಾಹ್ನವಿ,** ಹಿರಿಯ ಸಹಾಯಕ ನಿರ್ದೇಶಕರು | ಸದಸ್ಯರು |
| ೬. | **ಶ್ರೀಮತಿ ಎಂ. ಶಿಲ್ಪ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೩. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು–09 | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001 | ಸದಸ್ಯರು |
| ೭. | **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು–560001 | ಸದಸ್ಯರು |
| ೮. | **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು–560012 | ಸದಸ್ಯರು |
| ೯. | **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009 | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಂಡಿತವಾಗಿ ನಿರ್ಣಯಗೊಂಡವು.

| ವಿ.ಸಂ. | | ವಿಷಯ, ಟಿಪ್ಪಣಿ ಮತ್ತು ನಿರ್ಣಯ |
|---|---|---|
| ವಿಷಯ 01 | ವಿಷಯ ಮತ್ತು ಟಿಪ್ಪಣಿ | **ಪ್ರಶಾಸನ ಸಮಿತಿ 46ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 46ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 22.06.2018ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಕೈಗೊಳ್ಳಲಾದ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯು ಅನುಮೋದಿಸಿತು.** |
| ವಿಷಯ 02 | ವಿಷಯ ಮತ್ತು ಟಿಪ್ಪಣಿ | **ಪ್ರಶಿಕ್ಷಣ ಸಮಿತಿಯ 24ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ,**<br>ದಿನಾಂಕ: 06.09.2018ರಂದು ಪ್ರಶಿಕ್ಷಣ ಪರಿಷತ್ತಿನ 24ನೇ ಸಭೆ ನಡೆಸಲಾಯಿತು. ಈ ಸಭೆಯ ನಡಾವಳಿಯನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **1. ದಿನಾಂಕ: 06.09.2018ರಂದು ಪ್ರಶಿಕ್ಷಣ ಪರಿಷತ್ತಿನ 24ನೇ ಸಭೆಯ ನಡಾವಳಿಯನ್ನು ಅನುಮೋದಿಸಲಾಯಿತು.**<br>**2. ಪಿಎಚ್.ಡಿ ಶುಲ್ಕದ ಬಗೆಗೆ ಮುಂದಿನ ಪ್ರಶಾಸನ ಸಮಿತಿಯಲ್ಲಿ ವಿಷಯವನ್ನು ಮಂಡಿಸಲು ತಿಳಿಸಲಾಯಿತು.** |

| | | |
|---|---|---|
| ವಿಷಯ 03 | ವಿಷಯ ಮತ್ತು ಟಿಪ್ಪಣಿ | **ಹಣಕಾಸು ಸಮಿತಿಯ 30ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ,**<br>ದಿನಾಂಕ: 05.09.2018ರಂದು **ಹಣಕಾಸು ಸಮಿತಿಯ 30ನೇ** ಸಭೆ ನಡೆಸಲಾಯಿತು. ಈ ಸಭೆಯ ನಡಾವಳಿಯನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ದಿನಾಂಕ: 05.09.2018ರಂದು ಹಣಕಾಸು ಸಮಿತಿಯ 30ನೇ ಸಭೆ ನಡೆಸಲಾಯಿತು. ಈ ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು.** |
| ವಿಷಯ 04 | ವಿಷಯ ಮತ್ತು ಟಿಪ್ಪಣಿ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬೋಧಕ ಹುದ್ದೆಗಳ ಸ್ಥಾನೀಕರಣ ಸೌಲಭ್ಯ ನೀಡುವ ಪರಿನಿಯಮಾವಳಿಯನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬೋಧಕ ಹುದ್ದೆಗಳ ಸ್ಥಾನೀಕರಣ (CAS) ಸೌಲಭ್ಯ ನೀಡುವ ಕರಡು ಪರಿನಿಯಮಾವಳಿಯನ್ನು ಅನುಮೋದನೆಗಾಗಿ ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಸರ್ಕಾರಿ ಪತ್ರ ಸಂಖ್ಯೆ : ಇಡಿ 383 ಯುಎನ್ ಇ 2017, ದಿನಾಂಕ: 30.08.2018ರಂತೆ ಸದರಿ ನಿಯಮಾವಳಿಗೆ ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಅನುಮೋದನೆ ನೀಡಿರುವ ಬಗ್ಗೆ ಕೂಡಲೇ ಸರ್ಕಾರಕ್ಕೆ ಮಾಹಿತಿಯನ್ನು ಒದಗಿಸುವಂತೆ ಕೋರಿರುವುದರಿಂದ ಸದರಿ ಬೋಧಕ ಹುದ್ದೆಗಳ ಸ್ಥಾನೀಕರಣ ಸೌಲಭ್ಯ ಪರಿಷ್ಕೃತ ಕರಡು ಪರಿನಿಯಮಾವಳಿಯನ್ನು ಅನುಮೋದಿಸಲು ಮಂಡಿಸಿದೆ. |
| | ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬೋಧಕ ಹುದ್ದೆಗಳ ಸ್ಥಾನೀಕರಣ ಸೌಲಭ್ಯ ನೀಡುವ ಪರಿಷ್ಕೃತ ಕರಡು ಪರಿನಿಯಮಾವಳಿಯನ್ನು ಸಭೆಯು ಅನುಮೋದಿಸಿದೆ.** |
| ವಿಷಯ 05 | ವಿಷಯ ಮತ್ತು ಟಿಪ್ಪಣಿ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವೃಂದ ಮತ್ತು ನೇಮಕಾತಿ (C&R) ನಿಯಮಗಳನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡುವ ಬಗೆಗೆ.**<br>ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ಶೈಕ್ಷಣಿಕವಾಗಿ ಮತ್ತು ಆಡಳಿತಾತ್ಮಕವಾಗಿ ಕಾರ್ಯ ನಿರ್ವಹಿಸುತ್ತಿದ್ದು ಇದಕ್ಕಾಗಿ ವೃಂದ ಮತ್ತು ನೇಮಕಾತಿ **(C&R)** ನಿಯಮಗಳನ್ನು ರಚಿಸಿದ್ದು ಇದನ್ನು ಸರ್ಕಾರಕ್ಕೆ ಸಲ್ಲಿಸಿ ಒಪ್ಪಿಗೆ ಪಡೆಯಲು ಸಭೆಯ ಅನುಮೋದನೆಗೆ ಇರಿಸಿದೆ. |
| | ನಿರ್ಣಯ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವೃಂದ ಮತ್ತು ನೇಮಕಾತಿ (C&R) ನಿಯಮಗಳನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದನೆ ನೀಡಿತು.** |
| ವಿಷಯ 06 | ವಿಷಯ ಮತ್ತು ಟಿಪ್ಪಣಿ | **ಗುರುಕುಲ ಶಿಕ್ಷಣ ಟ್ರಸ್ಟ್ ಕಾಲೇಜು ಮತ್ತು ಪಾಠಶಾಲೆಗಳ ಅಭಿವೃದ್ಧಿ ಸಮಿತಿ ಪುನಾರಚಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶವಿದ್ಯಾಲಯದ ಅಡಿಯಲ್ಲಿ ಬರುವ ಸಿ.ಎಲ್.ವೈ ಸಂಸ್ಕೃತ ಸ್ನಾತಕ–ಸ್ನಾತಕೋತ್ತರ ಅಧ್ಯಯನ ಕೇಂದ್ರ, ಮೂಕಾಂಬಿಕ ನಗರ, ಧಾರವಾಡ ಹಾಗೂ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ಇರುವ ಗುರುಕುಲ ಸಂಸ್ಕೃತ ಪಾಠಶಾಲೆ, ಮಹೇಂದ್ರಕರಚಾಳ, ಆಂಜನೇಯನಗರ, ಆದರ್ಶನಗರ – ಧಾರವಾಡ ಈ ಮೂರು ಪಾಠಶಾಲೆಗಳು ವ್ಯವಸ್ಥಿತವಾಗಿ ನಡೆಯುವ ಉದ್ದೇಶದಿಂದ ದಿನಾಂಕ: 24.05.2012ರಲ್ಲಿ ಗುರುಕುಲ ಶಿಕ್ಷಣ ಟ್ರಸ್ಟ್ ಕಾಲೇಜು ಮತ್ತು ಪಾಠಶಾಲೆಗಳ ಅಭಿವೃದ್ಧಿ ಸಮಿತಿಯನ್ನು ರಚಿಸಲಾಗಿತ್ತು . ದಿನಾಂಕ: 11.07.2018ರಂದು ಈ ಸಮಿತಿಯನ್ನು ಪುನರ್ ರಚಿಸಲಾಗಿದೆ. ಇದಕ್ಕೆ ಘಟನೋತ್ತರ ಅನುಮೋದನೆ ನೀಡಲು ಕೋರಿದೆ. |
| | ನಿರ್ಣಯ | **ಗುರುಕುಲ ಶಿಕ್ಷಣ ಟ್ರಸ್ಟ್ ಕಾಲೇಜು ಮತ್ತು ಪಾಠಶಾಲೆಗಳ ಅಭಿವೃದ್ಧಿ ಸಮಿತಿ ಪುನಾರಚಿಸಿರುವುದಕ್ಕೆ ಸಭೆಯು ಘಟನೋತ್ತರ ಅನುಮೋದನೆ ನೀಡಿತು.** |
| ವಿಷಯ 07 | ವಿಷಯ ಮತ್ತು ಟಿಪ್ಪಣಿ | **ಅನುದಾನಿತ ಕಾಲೇಜುಗಳಿಗೆ ಅಧ್ಯಾಪಕರಿಗೆ ಯುಜಿಸಿ ವೇತನಶ್ರೇಣಿ ಕೊಡುವ ಬಗ್ಗೆ ಸಮಿತಿ ರಚನೆ ಕುರಿತು,**<br>ರಾಜ್ಯದಲ್ಲಿರುವ ಅನುದಾನಿತ ಸಂಸ್ಕೃತ ಕಾಲೇಜುಗಳ ಅಧ್ಯಾಪಕರು ತಮಗೂ ಯುಜಿಸಿ ವೇತನಶ್ರೇಣಿಯನ್ನು ವಿಸ್ತರಿಸಬೇಕೆಂದು ಮನವಿ ಮಾಡಿರುತ್ತಾರೆ. ಈ ಸಂಬಂಧ ಒಂದು ಸಮಿತಿ ರಚಿಸಬಹುದಾಗಿದ್ದು ಸಭೆಯ ಅನುಮೋದನೆ ಕೋರಿದೆ. |
| | ನಿರ್ಣಯ | **ಅನುದಾನಿತ ಕಾಲೇಜುಗಳಿಗೆ ಅಧ್ಯಾಪಕರಿಗೆ ಯುಜಿಸಿ ವೇತನಶ್ರೇಣಿ ಕೊಡುವ ಬಗ್ಗೆ ಈ ಕೆಳಕಂಡಂತೆ ಸಮಿತಿ ರಚನೆ ಮಾಡಲು ಸಭೆಯು ಒಪ್ಪಿದೆ.**<br>**1. ಶ್ರೀ ಯು.ಬಿ.ಉಳವಿ – ಅಧ್ಯಕ್ಷರು** |

| | | |
|---|---|---|
| | | 2. ಡಾ. ಬಿ.ವಿ ವೆಂಕಟರಮಣ – ಸದಸ್ಯರು<br>3. ಶ್ರೀ ವೆಂಕಟೇಶ ವಿ – ಸದಸ್ಯ ಸಂಚಾಲಕರು |
| ವಿಷಯ 08 | ವಿಷಯ ಮತ್ತು ಟಿಪ್ಪಣಿ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವತಿಯಿಂದ 2018–19 ನೇ ಸಾಲಿನ ನಾಟಕೋತ್ಸವ ನಡೆಸುವ ಬಗ್ಗೆ,**<br>ಕಳೆದ ವರ್ಷದಂತೆಯೇ ಈ ವರ್ಷವೂ "ನಾಟಕೋತ್ಸವ – 2018" ನ್ನು 2018–19ನೇ ಸಾಲಿನಲ್ಲಿ ಆಯೋಜಿಸಬಹುದಾಗಿದ್ದು ಸಂಸ್ಕೃತ ನಾಟಕೋತ್ಸವ ನಡೆಸಲು ಸುಮಾರು 5.00 ಲಕ್ಷ ರೂಗಳನ್ನು ಅಂದಾಜಿಸಲಾಗಿದೆ. ಈ ನಾಟಕೋತ್ಸವವನ್ನು ಶಿವಮೊಗ್ಗ, ಬೆಂಗಳೂರು ಅಥವಾ ಮೈಸೂರಿನಲ್ಲಿ ನಡೆಸಬಹುದಾಗಿದ್ದು ಸಭೆಯ ಅನುಮೋದನೆಗೆ ಮಂಡಿಸಿದೆ. |
| | ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವತಿಯಿಂದ 2018–19 ನೇ ಸಾಲಿನ ನಾಟಕೋತ್ಸವ ನಡೆಸಲು ಸಭೆಯು ಒಪ್ಪಿಗೆ ಸೂಚಿಸಿತು.** |
| ವಿಷಯ 09 | ವಿಷಯ ಮತ್ತು ಟಿಪ್ಪಣಿ | **ಮಹಿಳಾ ದೌರ್ಜನ್ಯ ತಡೆ ಕುರಿತಂತೆ ವಿಚಾರ ಸಂಕಿರಣ ಏರ್ಪಡಿಸುವ ಕುರಿತು,**<br>2018–19ನೇ ಶೈಕ್ಷಣಿಕ ವರ್ಷದಲ್ಲಿ ಬೆಂಗಳೂರಿನಲ್ಲಿ ಮಹಿಳಾ ದೌರ್ಜನ್ಯ ತಡೆ ಕುರಿತಂತೆ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಬಹುದಾಗಿದೆ. ಇದೇ ಸಂದರ್ಭದಲ್ಲಿ ಲೀಲಾದೇವಿ ಆರ್. ಪ್ರಸಾದ್ ರವರ "ಅಕ್ಕಮಹಾದೇವಿ" ಎಂಬ ಗ್ರಂಥದ ಸಂಸ್ಕೃತಾನುವಾದವನ್ನು ಬಿಡುಗಡೆ ಮಾಡಲು ತೀರ್ಮಾನಿಸಿದೆ. ಈ ವಿಚಾರ ಸಂಕಿರಣಕ್ಕೆ ಸುಮಾರು 1.50 ಲಕ್ಷರೂಗಳನ್ನು ಅಂದಾಜಿಸಲಾಗಿದೆ. ಇದನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಮಹಿಳಾ ದೌರ್ಜನ್ಯ ತಡೆ ಕುರಿತಂತೆ ವಿಚಾರ ಸಂಕಿರಣ ಏರ್ಪಡಿಸಲು ಒಪ್ಪಿದೆ. ಬೇರೆ ಸಂಸ್ಥೆಗಳ ಸಹಭಾಗಿತ್ವ ಪಡೆಯುವುದು ಸೂಕ್ತ ಎಂದು ಸಭೆಯು ಅಭಿಪ್ರಾಯಪಟ್ಟಿತು.** |
| ವಿಷಯ 10 | ವಿಷಯ ಮತ್ತು ಟಿಪ್ಪಣಿ | **ವಿಶ್ವವಿದ್ಯಾಲಯದ ಭಾಷಾ ಪಠ್ಯ ಪುಸ್ತಕಗಳ ಸಂಪಾದಕರಿಗೆ ಗೌರವಧನ ನೀಡುವ ಬಗ್ಗೆ,**<br>2018–19ನೇ ಸಾಲಿನಲ್ಲಿ ಶಾಸ್ತ್ರಿ ಬಿ.ಎ ಪ್ರಥಮ ಹಾಗೂ ದ್ವಿತೀಯ ವರ್ಷದ ನೂತನ ಆಂಗ್ಲ ಮತ್ತು ಕನ್ನಡ ಪಠ್ಯಪುಸ್ತಕಗಳನ್ನು ಮುದ್ರಿಸಲು 23ನೇ ಪ್ರಶಿಕ್ಷಣ ಪರಿಷತ್ತಿನ ಅನುಮತಿ ಪಡೆಯಲಾಗಿದೆ. ಆಂಗ್ಲ ಪಠ್ಯಪುಸ್ತಕಗಳನ್ನು ಡಾ. ಮನು ಚಕ್ರವರ್ತಿಯವರು ಹಾಗೂ ಕನ್ನಡ ಪಠ್ಯಪುಸ್ತಕಗಳನ್ನು ಡಾ. ಎಸ್. ಎಲ್. ಶ್ರೀನಿವಾಸಮೂರ್ತಿಯವರು ಸಂಪಾದಿಸಿದ್ದಾರೆ. ಇವರಿಗೆ ಗೌರವಧನವನ್ನು ಪಾವತಿಸುವ ಬಗ್ಗೆ ಸಭೆಯ ಅನುಮೋದನೆ ಕೋರಿದೆ. |
| | ನಿರ್ಣಯ | **ವಿಶ್ವವಿದ್ಯಾಲಯದ ಭಾಷಾ ಪಠ್ಯ ಪುಸ್ತಕಗಳ ಸಂಪಾದಕರಿಗೆ ಪ್ರಥಮಾ ಮತ್ತು ದ್ವಿತೀಯ ವರ್ಷಗಳನ್ನು ಸೇರಿಸಿಕೊಂಡಂತೆ ತಲಾ 10.000ರೂ ಗಳನ್ನು ಕೊಡಬಹುದೆಂದು ಸಭೆಯು ತೀರ್ಮಾನಿಸಿತು.** |
| ವಿಷಯ 11 | ವಿಷಯ ಮತ್ತು ಟಿಪ್ಪಣಿ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ವೇತನಶ್ರೇಣಿಯ "ಯೋಜನಾ ಸಹಾಯಕ (ಶೈಕ್ಷಣಿಕ)" ಹುದ್ದೆಯನ್ನು ಯುಜಿಸಿ ವೇತನಶ್ರೇಣಿಯ "ಸಹಾಯಕ ಪ್ರಾಧ್ಯಾಪಕ" ಹುದ್ದೆಗೆ ಸಮಾನಾಂತರದಲ್ಲಿ ಪರಿಗಣಿಸುವ ಬಗ್ಗೆ,**<br>ರಾಜ್ಯ ವೇತನಶ್ರೇಣಿಯ 'ಯೋಜನಾ ಸಹಾಯಕ (ಶೈಕ್ಷಣಿಕ)' ಹುದ್ದೆಗೆ ನೇಮಕಗೊಂಡಿರುವ 10 ಸಿಬ್ಬಂದಿಗಳು ಯುಜಿಸಿ ನಿಯಮಾವಳಿಗಳಲ್ಲಿ 'ಸಹಾಯಕ ಪ್ರಾಧ್ಯಾಪಕ' ಹುದ್ದೆಗೆ ನಿಗದಿಪಡಿಸಿರುವ ಅರ್ಹತೆಗಳನ್ನು ಹೊಂದಿರುತ್ತಾರೆ. ಆದರೆ, ಈ ಸಿಬ್ಬಂದಿಗಳಿಗೆ ಪದೋನ್ನತಿ/ಮುಂಬಡ್ತಿ ಸೇರಿದಂತೆ ಇನ್ನಿತರ ಸೇವಾ ಸೌಲಭ್ಯಗಳನ್ನು ಪಡೆಯುವ ಅವಕಾಶಗಳು ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ಪರಿನಿಯಮದಲ್ಲಿ ಇರುವುದಿಲ್ಲ. ಈ ಸಿಬ್ಬಂದಿಗಳ ಶೈಕ್ಷಣಿಕ ಅಭಿವೃದ್ಧಿಗೆ ಸಹಾಯಕವಾಗುವಂತೆ ಈಗಾಗಲೇ ನೇಮಕಾತಿ ಮಾಡಿ ಭರ್ತಿ ಮಾಡಿಕೊಂಡಿರುವ ಯೋಜನಾ ಸಹಾಯಕ (ಶೈಕ್ಷಣಿಕ) ಹುದ್ದೆಗಳನ್ನು ಯು.ಜಿ.ಸಿ. ವೇತನಶ್ರೇಣಿಯ 'ಸಹಾಯಕ ಪ್ರಾಧ್ಯಾಪಕ' ಹುದ್ದೆಗೆ ಮಾರ್ಪಡಿಸಲು ಕೋರಿರುತ್ತಾರೆ.<br>ವಿಶ್ವವಿದ್ಯಾಲಯದ ಕುಲಸಚಿವರು ಈ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಅಲ್ಲಿಂದ ಅನುಮೋದನೆ ದೊರೆತ ನಂತರ ಕ್ರಮ ಕೈಗೊಳ್ಳಬಹುದಾಗಿದೆ. ಇದನ್ನು ಅವಗಾಹನೆಗೆ ಮಂಡಿಸಿದೆ. |
| | ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ವೇತನಶ್ರೇಣಿಯ** |

| | | |
|---|---|---|
| | | **"ಯೋಜನಾ ಸಹಾಯಕ (ಶೈಕ್ಷಣಿಕ)" ಹುದ್ದೆಯನ್ನು ಯುಜಿಸಿ ವೇತನಶ್ರೇಣಿಯ "ಸಹಾಯಕ ಪ್ರಾಧ್ಯಾಪಕ" ಹುದ್ದೆಗೆ ಸಮಾನಾಂತರದಲ್ಲಿ ಪರಿಗಣಿಸುವ ಬಗ್ಗೆ ಸರ್ಕಾರದಿಂದ ಅನುಮೋದನೆ ದೊರೆತ ನಂತರ ಕ್ರಮ ಕೈಗೊಳ್ಳಲು ಸಭೆಯು ಒಪ್ಪಿದೆ.** |
| ವಿಷಯ 12 | ವಿಷಯ ಮತ್ತು ಟಿಪ್ಪಣಿ | **ಪ್ರೊ. ವಿ ಗಿರೀಶ್ ಚಂದ್ರ ಇವರಿಗೆ ವಿದೇಶ ಪ್ರಯಾಣಭತ್ಯೆ ನೀಡುವ ಬಗೆಗೆ.**<br>ಕೆನಡಾ ದೇಶದ ವ್ಯಾಂಕೋವರ್‌ನಲ್ಲಿ ನಡೆದ ವಿಶ್ವ ಸಂಸ್ಕೃತ ಸಮ್ಮೇಳನದಲ್ಲಿ ಭಾಗವಹಿಸಿದ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ. ವಿ ಗಿರೀಶ್ ಚಂದ್ರ ಇವರಿಗೆ ಪ್ರಯಾಣ ಭತ್ಯೆ ಮತ್ತು ಸಮ್ಮೇಳನದ ನೋಂದಣಿ ಶುಲ್ಕವಾದ ರೂ. 1,03,688 ರೂಗಳನ್ನು ಪಾವತಿಸಲು ಸಭೆಯ ಅನುಮೋದನೆ ಕೋರಿದೆ. |
| | ನಿರ್ಣಯ | **ಪ್ರೊ. ವಿ ಗಿರೀಶ್ ಚಂದ್ರ ಇವರಿಗೆ ವಿದೇಶ ಪ್ರಯಾಣಭತ್ಯೆ ನೀಡುವ ಬಗ್ಗೆ ಪರಿಶೀಲಿಸಲಾಯಿತು. ವಿಶ್ವವಿದ್ಯಾಲಯಗಳು ಸ್ವಾಯತ್ತ ಸಂಸ್ಥೆಗಳಾಗಿವೆ. ಇನ್ನಿತರ ವಿಶ್ವವಿದ್ಯಾಲಯಗಳ ನಿಯಮಾವಳಿಯನ್ನು ಪರಿಶೀಲಿಸಿ ಮೊತ್ತ ಪಾವತಿಸಲು ಅನುಮತಿಸಲಾಗಿದೆ.** |
| ವಿಷಯ 13 | ವಿಷಯ ಮತ್ತು ಟಿಪ್ಪಣಿ | **ಯು.ಜಿ.ಸಿ. ವೇತನ ಪಡೆಯುತ್ತಿರುವ ವಿಶ್ವವಿದ್ಯಾಲಯದ ಅಧ್ಯಾಪಕರಿಗೆ ವಿದೇಶ ಪ್ರಯಾಣ ಭತ್ಯೆ ಪಾವತಿಸುವ ಬಗೆಗೆ.**<br>ಯು.ಜಿ.ಸಿ. ವೇತನ ಪಡೆಯುತ್ತಿರುವ ವಿಶ್ವವಿದ್ಯಾಲಯದ ಅಧ್ಯಾಪಕರಿಗೆ ವಿದೇಶ ಪ್ರಯಾಣ ಭತ್ಯೆ ಪಾವತಿಸುವ ಬಗೆಗೆ ನಿಯಮವನ್ನು ರೂಪಿಸುವ ಅಗತ್ಯವಿದೆ. ಆ ಸಂಬಂಧವಾಗಿ ಸಭೆಯ ಅವಗಾಹನೆ ಮಂಡಿಸಿದೆ. |
| | ನಿರ್ಣಯ | **ಯು.ಜಿ.ಸಿ. ವೇತನ ಪಡೆಯುತ್ತಿರುವ ವಿಶ್ವವಿದ್ಯಾಲಯದ ಅಧ್ಯಾಪಕರಿಗೆ ವಿದೇಶ ಪ್ರಯಾಣ ಭತ್ಯೆ ಪಾವತಿಸುವ ಬಗ್ಗೆ ನಿಯಮವನ್ನು ರೂಪಿಸಿ ಮುಂದಿನ ಪ್ರಶಾಸನ ಸಮಿತಿಯ ಸಭೆಯಲ್ಲಿ ಮಂಡಿಸಲು ತಿಳಿಸಿದೆ.** |
| ವಿಷಯ 14 | ವಿಷಯ ಮತ್ತು ಟಿಪ್ಪಣಿ | **ಜ್ಯೋತಿಷ್ಯ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್‌ಗಳ ಮೌಲ್ಯಮಾಪಕರ ಸಂಭಾವನೆಯನ್ನು ಹೆಚ್ಚಿಸುವ ಬಗೆಗೆ.**<br>ಜ್ಯೋತಿಷ್ಯ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್‌ಗಳ ಮೌಲ್ಯಮಾಪಕರ ಸಂಭಾವನೆಯನ್ನು 10ರೂ ಗಳಿಂದ 12 ರೂಗಳಿಗೆ ಹೆಚ್ಚಿಸಬಹುದಾಗಿದ್ದು ಸಭೆಯ ಅನುಮೋದನೆ ಕೋರಿದೆ. |
| | ನಿರ್ಣಯ | **ಜ್ಯೋತಿಷ್ಯ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್‌ಗಳ ಮೌಲ್ಯಮಾಪಕರ ಸಂಭಾವನೆಯನ್ನು 10ರೂ ಗಳಿಂದ 12 ರೂಗಳಿಗೆ ಹೆಚ್ಚಿಸಲು ಸಭೆಯು ಒಪ್ಪಿದೆ.** |
| ವಿಷಯ 15 | ವಿಷಯ ಮತ್ತು ಟಿಪ್ಪಣಿ | **ವಿಶ್ವವಿದ್ಯಾಲಯದ ನೂತನ ಕಟ್ಟಡ ಉದ್ಘಾಟನೆ ಮತ್ತು ವಿಶ್ವವಿದ್ಯಾಲಯದ ಆವರಣದಲ್ಲಿ ಕಟ್ಟಲಾಗುವ ಕಟ್ಟಡದ ಅಡಿಗಲ್ಲು ಸಮಾರಂಭ ಕಾರ್ಯಕ್ರಮದ ಅಂದಾಜು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಈಗಾಗಲೇ ನಿರ್ಮಿಸಲಾಗಿರುವ ಮೊದಲನೇ ಮಹಡಿಯ ಉದ್ಘಾಟನಾ ಮತ್ತು ವಿಶ್ವವಿದ್ಯಾಲಯದ ಆವರಣದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕಟ್ಟಡದ ಅಡಿಗಲ್ಲು ಸಮಾರಂಭವನ್ನು ದಿನಾಂಕ 19.09.2018ರಂದು ನಡೆಸಲು ನಿರ್ಧರಿಸಲಾಗಿದೆ. ಈ ಕಾರ್ಯಕ್ರಮಕ್ಕೆ ತಗಲುವ ಅಂದಾಜು ಮೊತ್ತ ಸುಮಾರು 3.25.500 ರೂ. ಆಗಿರುತ್ತದೆ. ಅನುಮೋದನೆಗಾಗಿ ಸಭೆಯಲ್ಲಿ ಮಂಡಿಸಿದೆ. |
| | | **ವಿಶ್ವವಿದ್ಯಾಲಯದ ನೂತನ ಕಟ್ಟಡ ಉದ್ಘಾಟನೆ ಮತ್ತು ವಿಶ್ವವಿದ್ಯಾಲಯದ ಆವರಣದಲ್ಲಿ ಕಟ್ಟಲಾಗುವ ಕಟ್ಟಡದ ಅಡಿಗಲ್ಲು ಸಮಾರಂಭ ಕಾರ್ಯಕ್ರಮದ ಅಂದಾಜು ಮೊತ್ತಕ್ಕೆ ಸಭೆ ಅನುಮೋದನೆ ನೀಡಿದೆ.** |
| | **ಅಧ್ಯಕ್ಷರ ಅಪ್ಪಣೆಯ ಮೇರೆಗೆ** | |
| **ವಿ.ಸಂ.** | | **ವಿಷಯ ಮತ್ತು ಟಿಪ್ಪಣಿ** |
| ವಿಷಯ 01 | ವಿಷಯ ಮತ್ತು ಟಿಪ್ಪಣಿ | **ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳ ನೇಮಕಾತಿಯನ್ನು ಅನುಮೋದಿಸುವ ಬಗೆಗೆ.**<br>ಅಧಿಸೂಚನೆ ಸಂಖ್ಯೆ: ಕಸಂವಿ/06/ ರಾ.ಹು.ನೇ.ಅ/2018-19; ದಿನಾಂಕ: 20.06.2018 ಮತ್ತು ಕಸಂವಿ/06/ ರಾ.ಹು.ನೇ.ಅ/2018-19; ದಿನಾಂಕ: 04.07.2018ರ ಅನ್ವಯ ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದ ಅರ್ಹ ಅಭ್ಯರ್ಥಿಗಳಿಗೆ ದಿನಾಂಕ: 17.08.2018ರಂದು ಲಿಖಿತ ಪರೀಕ್ಷೆ ಹಾಗೂ ದಿನಾಂಕ: 06.09.2018ರಂದು ಸಂದರ್ಶನವನ್ನು ನಡೆಸಲಾಯಿತು. ಆಯ್ಕೆ ಸಮಿತಿಯ ಶಿಫಾರಸ್ಸಿನ ಅನ್ವಯ ಆಯಾ ಹುದ್ದೆಗಳಿಗೆ ಆಯ್ಕೆ ಆಗಿರುವ |

<table>
<tr><td></td><td></td><td>ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.</td></tr>
<tr><td></td><td>ನಿರ್ಣಯ</td><td>
ರಾಜ್ಯ ವೇತನಶ್ರೇಣಿಯ ಬೋಧಕೇತರ ಯೋಜನಾ ಸಹಾಯಕರು (ಶೈಕ್ಷಣಿಕ), ಡಾಟಾ ಎಂಟ್ರಿ ಆಪರೇಟರ್ ಹಾಗೂ ಟೆಲಿಫೋನ್ ಆಪರೇಟರ್ ಮತ್ತು ಗ್ರಂಥಾಲಯ ಸಹಾಯಕರು ಈ ಹುದ್ದೆಗಳಿಗೆ ದಿನಾಂಕ: 06.09.2018 ರಂದು ನಡೆದ 'ಆಯ್ಕೆ ಸಮಿತಿ' ಸಭೆಯ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಪರಿಶೀಲಿಸಿತು. ಆಯಾ ಹುದ್ದೆಗಳಿಗೆ ಬೇಕಾಗುವ ಸೇವಾ ಅನುಭವ, ಜ್ಯೇಷ್ಠತೆ ಮತ್ತು ಶೈಕ್ಷಣಿಕ ಅರ್ಹತೆಯನ್ನು ಕ್ರಮಾನುಸಾರವಾಗಿ ಪರಿಗಣಿಸಿ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ಸಭೆಯು ಅನುಮೋದನೆಯನ್ನು ನೀಡಿತು.
<table>
<tr><th>ಕ್ರ.ಸಂ.</th><th>ಹುದ್ದೆಯ ಪದನಾಮ</th><th>ಆಯ್ಕೆಗೊಂಡ ಅಭ್ಯರ್ಥಿಗಳು</th></tr>
<tr><td rowspan="2">01.</td><td rowspan="2">ಯೋಜನಾ ಸಹಾಯಕರು (ಶೈಕ್ಷಣಿಕ)</td><td>ಹೇಮರಾಜ ಎನ್. ಎಸ್<br>ಶ್ರೀ ಆದಿಚುಂಚನಗಿರಿ ಕ್ಷೇತ್ರ, ಚುಂಚನಹಳ್ಳಿ (ಪೋ), ನಾಗಮಂಗಲ ತಾ. ಮಂಡ್ಯ ಜಿಲ್ಲೆ</td></tr>
<tr><td>ವಾಲ್ಮೀಕರಾಮ<br>S/o. ಶರಣಪ್ಪ ಸೋಲಾಪುರೆ, ಕೌಡಿಯಾಳ, ಬಸವಕಲ್ಯಾಣ ತಾ. ಬೀದರ್ ಜಿಲ್ಲೆ.</td></tr>
<tr><td>02.</td><td>ಟೆಲಿಫೋನ್ ಆಪರೇಟರ್</td><td>ಗಿರೀಶ ಸಿ.ಬಿ<br>S/o. ಬಸವರಾಜು ಬಿ, "ಶ್ರೀ ವೆಂಕಟೇಶ್ವರಸ್ವಾಮಿ ನಿಲಯ", ಉಪ್ಪಾರಹಳ್ಳಿ, ಶಿರಾಸಿ ತೋಟದ ರಸ್ತೆ, ತುಮಕೂರು ಜಿಲ್ಲೆ</td></tr>
</table>
ಉಳಿದಂತೆ, ಯೋಜನಾ ಸಹಾಯಕ (ಶೈಕ್ಷಣಿಕ) – 02 (ಪ್ರವರ್ಗ 2ಬಿ) (ಪ.ಜಾ – ಹೈ.ಕ); ಕಂಪ್ಯೂಟರ್ ಪ್ರೋಗ್ರಾಮರ್–01(ಸಾಮಾನ್ಯ); ಶೀಘ್ರಲಿಪಿಕಾರರು–01(ಸಾಮಾನ್ಯ); ಡಾಟಾ ಎಂಟ್ರಿ ಆಪರೇಟರ್ –01 (ಸಾಮಾನ್ಯ – ಹೈ.ಕ), ಗ್ರಂಥಾಲಯ ಸಹಾಯಕರು –01 (ಸಾಮಾನ್ಯ – ಹೈ.ಕ), –ಈ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲ್ಲದಿರುವ ಹಿನ್ನೆಲೆಯಲ್ಲಿ ಮತ್ತೊಮ್ಮೆ ಅಧಿಸೂಚನೆಯನ್ನು ಹೊರಡಿಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮಕೈಗೊಳ್ಳಬಹುದೆಂದು ಸಭೆಯು ಸೂಚಿಸಿತು. ನೇಮಕಾತಿ ಹೊಂದಿರುವವರು ನೇಮಕಾತಿ ಆದೇಶ ಹೊರಡಿಸಿದ ಒಂದು ವಾರದ ಒಳಗೆ ಕರ್ತವ್ಯಕ್ಕೆ ಹಾಜರಾಗಲು ಸಭೆಯು ಸೂಚಿಸಿತು.
</td></tr>
</table>

Shilpa

ಶ್ರೀಮತಿ ಎಂ. ಶಿಲ್ಪ, ಕೆ.ಎ.ಎಸ್.
ಸದಸ್ಯ ಕಾರ್ಯದರ್ಶಿ

**ಪ್ರೊ. ಪದ್ಮಶೇಖರ್**
ಅಧ್ಯಕ್ಷರು